# ಕ್ರಿಕೆಟ್ ರಾಣಿ ಮಿಥಾಲಿ



■ ಎನ್ವಿ

ಮಿಥಾಲಿ ರಾಜ್ ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ಕಾಲಿಟ್ಟಿದ್ದು 1999ರಲ್ಲಿ. ಈಗ ಅವರಿಗೆ 39 ವರ್ಷ. ಆರು ವಿಶ್ವಕಪ್ ಟೂರ್ನಿಗಳಲ್ಲಿ ಆಡಿದ್ದಾರೆ. ಸತತವಾಗಿ ಏಳು ಅರ್ಧಶತಕಗಳನ್ನು ಏಕದಿನ ಕ್ರಿಕೆಟ್‌ನಲ್ಲಿ ಗಳಿಸಿದ ವಿಶ್ವದಾಖಲೆ ಅವರದು. 155 ಏಕದಿನ ಪಂದ್ಯಗಳಲ್ಲಿ ನಾಯಕಿಯಾಗಿ ಜವಾಬ್ದಾರಿ ನಿರ್ವಹಿಸಿದ್ದಾರೆ. 17 ವರ್ಷ ತುಂಬುವ ಮೊದಲೇ ಏಕದಿನ ಪಂದ್ಯದಲ್ಲಿ ಶತಕ ಗಳಿಸಿ, ಅಂಥದೊಂದು ಸಾಧನೆ ಮಾಡಿದ ವಿಶ್ವದ ಅತಿ ಕಿರಿಯ ಆಟಗಾರ್ತಿ ಎನ್ನುವ ದಾಖಲೆ ಬರೆದದ್ದೂ ಅವರೇ. 20 ವರ್ಷ ತುಂಬುವ ಮೊದಲೇ ಟೆಸ್ಟ್‌ನಲ್ಲಿ ದ್ವಿಶತಕ ಗಳಿಸಿದ ಅತಿ ಕಿರಿಯ ಆಟಗಾರ್ತಿ ಎಂಬುದು ಇನ್ನೊಂದು ದಾಖಲೆ. ಒಟ್ಟು 64 ಅರ್ಧಶತಕಗಳನ್ನು ಏಕದಿನ ಪಂದ್ಯಗಳಲ್ಲಿ ದಾಖಲಿಸಿರುವುದೂ ದಾಖಲೆಯೇ.

2017ರಲ್ಲಿ ಇಂಗ್ಲೆಂಡ್‌ಗೆ ಹೊರಟಿದ್ದ ಭಾರತ ಕ್ರಿಕೆಟ್ ತಂಡದ ಆಟಗಾರ್ತಿಯರನ್ನು ಬೀಳ್ಕೊಡಲು ವಿಮಾನ ನಿಲ್ದಾಣದಲ್ಲಿ ಕೆಲವೇ ಪೋಷಕರು–ಸ್ನೇಹಿತರಿದ್ದರು. ವಿಶ್ವಕಪ್ ಆಡಲು ಅಲ್ಲಿಗೆ ಹೊರಟಿದ್ದ ಏಕದಿನ ಕ್ರಿಕೆಟ್ ತಂಡದ ಬಗೆಗೆ ಬಹುತೇಕರಲ್ಲಿ ನಿರುತ್ಸಾಹ. ನಾಯಕಿ ಮಿಥಾಲಿ ರಾಜ್ ತಮ್ಮಿಷ್ಟದ ಪುಸ್ತಕ ಓದುತ್ತಾ ಕುಳಿತಿದ್ದರು. ಮಾಧ್ಯಮಮಿತ್ರರಲ್ಲೂ ಉತ್ಸಾಹ ಅಷ್ಟಕ್ಕಷ್ಟೆ. ಶಾಸ್ತ್ರಕ್ಕೆಂದು ಸುದ್ದಿಗೋಷ್ಠಿ ನಡೆಯಿತು.

2013ರ ವಿಶ್ವಕಪ್‌ನಲ್ಲಿ ಗುಂಪು ಹಂತದಲ್ಲೇ ತಂಡ ನಿರ್ಗಮಿಸಿದ್ದರಿಂದ ಭಾರತದ ವನಿತೆಯರ ಕ್ರಿಕೆಟ್ ಕೌಶಲದ ಮೇಲೆ ನಿರೀಕ್ಷೆ ಇಟ್ಟುಕೊಂಡಿದ್ದವರು ಕಡಿಮೆ. ಆದರೆ, ಕೋಚ್ ತುಷಾರ್ ಅರೋಥೆ ಅವರಿಗೆ ಆಟಗಾರ್ತಿಯರ ಮೇಲೆ ಎಂಥದ್ದೋ ನಂಬಿಕೆ. ಹೊರಡುವ ಮುಂಚೆ ಅವರು ತಂಡದ ಎಲ್ಲ ಆಟಗಾರ್ತಿಯರನ್ನೂ ಸಭೆ ಕರೆದರು. ನಾಯಕಿ ಮಿಥಾಲಿ ಸೇರಿ ಎಲ್ಲರಿಗೂ ಇದ್ದಕ್ಕಿದ್ದಂತೆ ಸಭೆ ಯಾಕೆ ಎಂಬ ಪ್ರಶ್ನೆ. ಅಲ್ಲಿ ಅರೋಥೆ ಕೇಳಿದ ಪ್ರಶ್ನೆ: 'ನಾವು ಇಂಗ್ಲೆಂಡ್‌ಗೆ ಯಾಕೆ ಹೋಗುತ್ತಿದ್ದೇವೆ?' ಹಾಗೆ ಕೇಳಿದ್ದೇ, ಅವರು ನಾಯಕಿಯ ಕಡೆ ನೋಡಿದರು. 'ವಿಶ್ವಕಪ್ ಗೆಲ್ಲೋದಕ್ಕೆ' ಎಂದು ಮಿಥಾಲಿ ಉತ್ತರ ಕೊಟ್ಟ ತಕ್ಷಣವೇ ಸಭೆ ಮುಗಿಯಿತು.

2017ರ ಜುಲೈ 23ರಂದು ಇಂಗ್ಲೆಂಡ್ ವಿರುದ್ಧ ಫೈನಲ್ಸ್‌ನಲ್ಲಿ ಭಾರತದ ವನಿತೆಯರು ಬರೀ 9 ರನ್‌ಗಳಿಂದ ಸೋತರು. ಆದರೆ, ವಿಮಾನ ನಿಲ್ದಾಣಕ್ಕೆ ಮರಳಿದಾಗ ಅವರನ್ನು ಎದುರುಗೊಳ್ಳಲು ಸೇರಿದ್ದ ಜನರ ಸಂಖ್ಯೆ ಸಹಜವಾಗಿಯೇ ಹೆಚ್ಚಾಗಿತ್ತು.

ಭಾರತ ವನಿತೆಯರ ಕ್ರಿಕೆಟ್ ತಂಡದ ಪುನರುತ್ಥಾನಕ್ಕೆ ಮೇಲಿನ ದೃಶ್ಯ ಕನ್ನಡಿ ಹಿಡಿಯುತ್ತದೆ. ಮಿಥಾಲಿ ಹಾಗೂ ಝೂಲನ್ ಗೋಸ್ವಾಮಿ ಇಬ್ಬರನ್ನು ಹೊರತುಪಡಿಸಿದರೆ ಮಿಕ್ಕೆಲ್ಲ ಆಟಗಾರ್ತಿಯರಿಗೆ ಅದು ಮೊದಲ ವಿಶ್ವಕಪ್ ಆಗಿತ್ತೆನ್ನುವುದು ಆಸಕ್ತಿಕರ.

ಸ್ಮೃತಿ ಮಂದಾನಾ, ಜರೆಮಿಯಾ ರಾಡ್ರಿಗ್ಸ್, ಹರ್ಮನ್‌ಪ್ರೀತ್ ಕೌರ್, ವೇದಾ ಕೃಷ್ಣಮೂರ್ತಿ... ಇವರೆಲ್ಲರ ಸ್ಟ್ರೈಕ್‌ರೇಟ್ ಮಿಥಾಲಿ ಅವರದ್ದಕ್ಕಿಂತ ಹೆಚ್ಚಾಗಿದ್ದ ಕಾಲಘಟ್ಟವೊಂದು ಇತ್ತು. ಆಗ ಸಾವಧಾನದ ಮೂರ್ತಿಯಂತಿದ್ದ ಮಿಥಾಲಿ ಬದಲಾದ ವೇಗಕ್ಕೆ ಹೊಂದಿಕೊಳ್ಳಲು ಮೂವತ್ತಾರರ ಪ್ರಾಯದಲ್ಲಿಯೂ ಯತ್ನಿಸಿದರು. 98.19ರಷ್ಟಿದ್ದ ಸರಾಸರಿ ಸ್ಟ್ರೈಕ್‌ರೇಟ್ ಅನ್ನು 105ಕ್ಕೆ ಹಿಗ್ಗಿಸಿಕೊಂಡರು.

ಸ್ಮೃತಿ ಹಾಗೂ ಮಿಥಾಲಿ ಇಬ್ಬರನ್ನೂ ಎರಡು ಕಾಲಗಳ ಪ್ರತಿನಿಧಿಗಳಾಗಿ ನೋಡುವುದಾದರೆ, ಇಬ್ಬರ ನಡುವಿನ ವಯಸ್ಸಿನ ಅಂತರ 14 ವರ್ಷಗಳು.

ಮಹಿಳೆಯರ ಟ್ವೆಂಟಿ–20 ವಿಶ್ವಕಪ್ ಕ್ರಿಕೆಟ್‌ನ ಸೆಮಿಫೈನಲ್ಸ್‌ನಲ್ಲಿ ಭಾರತದ ಹೆಣ್ಣುಮಕ್ಕಳು ಇಂಗ್ಲೆಂಡ್ ಎದುರು ಸೋತದ್ದಕ್ಕಿಂತ, ಅನುಭವಿ ಮಿಥಾಲಿ ರಾಜ್ ವ್ಯಕ್ತಪಡಿಸಿದ ಅಸಮಾಧಾನ ಸದ್ದು ಮಾಡಿತ್ತು. 'ಇಪ್ಪತ್ತು ವರ್ಷ ದೇಶಕ್ಕಾಗಿ ಆಡಿದ ತಮ್ಮ ಬದುಕಿನ ಅತಿ ಕೆಟ್ಟ ದಿನಗಳಿವು' ಎಂದ ಮಿಥಾಲಿ, ಖಿನ್ನರಾಗಿರುವುದಾಗಿಯೂ ಹೇಳಿಕೊಂಡಿದ್ದರು. ತಂಡದ ಕೋಚ್ ರಮೇಶ್ ಪೊವಾರ್, 'ಮಿಥಾಲಿ ಉದಾಸೀನ ಧೋರಣೆಯವರು. ವ್ಯಕ್ತಿಗಿಂತ ನನಗೆ ದೇಶ ಮುಖ್ಯ' ಎಂಬರ್ಥದ ಮಾತನ್ನಾಡಿದ್ದರು.

ಪಾಕಿಸ್ತಾನ ಮಹಿಳೆಯರ ಏಷ್ಯಾ ಕಪ್ ಟ್ವೆಂಟಿ–20 ಕ್ರಿಕೆಟ್ ಫೈನಲ್ಸ್‌ನಲ್ಲಿ 17 ರನ್‌ಗಳಿಂದ ಸೋತಿದ್ದಾಗ ಮಿಥಾಲಿ ಅಜೇಯ 73 ರನ್ ಗಳಿಸಿದ್ದರು. ಅದು ಗೆಲುವಿಗೆ ಕಾರಣವಾಗಿತ್ತು. ಮೂವತ್ತನಾಲ್ಕರ ವಯಸ್ಸಿನಲ್ಲಿ ಮೂಡಿದ್ದ ಆಟವದು.

ಮಿಥಾಲಿ ತಮಿಳು ನೆಲದವರು. ಹುಟ್ಟಿದ್ದು ರಾಜಸ್ಥಾನದ ಜೋಧಪುರದಲ್ಲಿ. ಅಪ್ಪ ದೊರೈರಾಜ್ ಭಾರತೀಯ ವಾಯುಸೇನೆಯಲ್ಲಿ ಕೆಲಸ ಮಾಡುತ್ತಿದ್ದರು. ಆಗೀಗ ವರ್ಗವಾಗುತ್ತಿದ್ದರು. ಬಾಲ್ಯದಲ್ಲಿ ಹೈದರಾಬಾದ್ ಗಲ್ಲಿಗಳಲ್ಲಿ ಆಡುತ್ತಿದ್ದರು. ಭರತನಾಟ್ಯದ ತಾಲೀಮು ಒಂದು ಕಡೆ, ಕ್ರಿಕೆಟ್ ಆಟದ ಹುಚ್ಚು ಇನ್ನೊಂದೆಡೆ. ಸಿಕಂದರಾಬಾದ್‌ನಲ್ಲಿ ಹುಡುಗರ ಜೊತೆ ನೆಟ್ಸ್‌ನಲ್ಲಿ ಅಭ್ಯಾಸ ಮಾಡುತ್ತಿದ್ದ ಮಿಥಾಲಿ ಪ್ರತಿಭೆ ಕಂಡು ಅವರ ಅಪ್ಪ ಬೆರಗಾಗಿ, ಮಗಳ ಪ್ರತಿಭೆಗೆ ನೀರೆರೆದರು. ಮಗಳ ಕಲಿಕೆಗೆ ಪಿಕ್‌ಅಪ್, ಡ್ರಾಪ್ ಮಾಡುವ ಉದ್ದೇಶದಿಂದ ಅಮ್ಮ ಕೆಲಸ ಬಿಟ್ಟರು. 17ನೇ ವಯಸ್ಸಿನಲ್ಲಿ ರಾಷ್ಟ್ರದ ತಂಡ ಪ್ರತಿನಿಧಿಸಲು ಆಹ್ವಾನ ಬಂದಮೇಲೆ ಮಿಥಾಲಿ ಭರತನಾಟ್ಯ ಬಿಟ್ಟು, ಕ್ರಿಕೆಟ್ ಪ್ಯಾಡ್ ತೊಟ್ಟರು.

1999ರಲ್ಲಿ ಐರ್ಲೆಂಡ್ ವಿರುದ್ಧ ಮೊದಲ ಏಕದಿನ ಕ್ರಿಕೆಟ್ ಪಂದ್ಯದಲ್ಲಿ ಔಟಾಗದೆ 114 ರನ್ ಗಳಿಸಿದಾಗ ಅಪ್ಪ ತಾವೇ ಶತಕ ಹೊಡೆದಷ್ಟು ಸಂಭ್ರಮ ಪಟ್ಟಿದ್ದರು. 2002ರ ಆಗಸ್ಟ್ 17ರಂದು ಲಖನೌದಲ್ಲಿ ದಕ್ಷಿಣ ಆಫ್ರಿಕಾ ಎದುರಿನ ಟೆಸ್ಟ್ ಪಂದ್ಯದ ಇನಿಂಗ್ಸ್‌ನಲ್ಲಿ 209 ರನ್ ಗಳಿಸಿ ಔಟಾಗದೆ ಉಳಿದರಲ್ಲ; ಆಗ ಇಂಗ್ಲೆಂಡ್‌ನ ಕರೆನ್ ರೋಲ್ಟನ್ ದಾಖಲೆ ಅಳಿಸಿಹೋಯಿತು. ಆಮೇಲೆ ಇಂಗ್ಲೆಂಡ್ ವಿರುದ್ಧ 214 ರನ್ ಗಳಿಸಿ, ಆ ಸಾಧನೆಯನ್ನು ಉತ್ತಮಪಡಿಸಿಕೊಂಡಿದ್ದು ಇತಿಹಾಸ.

ಬರೀ 12 ಟೆಸ್ಟ್ ಪಂದ್ಯಗಳನ್ನು ಆಡಿರುವ ಮಿಥಾಲಿ, 232 ಏಕದಿನ ಪಂದ್ಯಗಳನ್ನು ಆಡಿದ್ದಾರೆ. 89 ಟ್ವೆಂಟಿ20 ಅಂತರರಾಷ್ಟ್ರೀಯ ಪಂದ್ಯಗಳಲ್ಲಿ ಬ್ಯಾಟಿಂಗನ್ನು ಸಾಣೆಗೆ ಒಡ್ಡಿಕೊಂಡಿದ್ದಾರೆ. ಟೆಸ್ಟ್‌ನಲ್ಲಿ 43.68, ಏಕದಿನದ ಪಂದ್ಯಗಳಲ್ಲಿ 50.68, ಟ್ವೆಂಟಿ20 ಪಂದ್ಯಗಳಲ್ಲಿ 37.52ರ ಸರಾಸರಿಯಲ್ಲಿ ಒಟ್ಟು 10,868 ರನ್‌ಗಳನ್ನು ಅವರು ದಾಖಲಿಸಿದ್ದಾರೆ. 23 ವರ್ಷಗಳ ಸುದೀರ್ಘ ಕ್ರಿಕೆಟ್ ವೃತ್ತಿಬದುಕಿಗೆ ಸುವರ್ಣ ಗರಿ ಎಳೆಯಲು ಇನ್ನೇನು ಬೇಕು? ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65